ಅಸಲು ದಾವೆ ನಂಃ 103/2016 ಪಿ.ಡಬ್ಲ್ಯೂಃ1- ಬಸಪ್ಪ ಕರಿಯಪ್ಪ ಗುಡಿಸಾಗರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 14-12-2023 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- 1 ರಿಂದ 6 ನೇ ಪ್ರತಿವಾದಿ ಪರ ಶ್ರೀ PKU ವಕೀಲರಿಂದ**

**1.** ಯಾವಗಲ್ ಗ್ರಾಮದಲ್ಲಿರುವ ನಮ್ಮ ಆಸ್ತಿ ಸಂಖ್ಯೆ1035 . ಅದರ ಪೂರ್ವಕ್ಕೆ ರಾಮಪ್ಪ ನಿಂಗಪ್ಪ ಮುಳ್ಳೂರ ಇವರ ಜಾಗ. ಪಶ್ಚಿಮಕ್ಕೆ ಕರಿಯಪ್ಪ ಸಿದ್ದಪ್ಪ ಗುಡಿಸಾಗರ ಆದ ನಮ್ಮದೇ ಆಸ್ತಿ , ಉತ್ತರಕ್ಕೆಃ ಭರಮಪ್ಪ ಯಲ್ಲಪ್ಪ ಕಿತ್ತೂರ ಇವರ ಜಾಗ ದಕ್ಷಿಣಕ್ಕೆಃ ಚನ್ನಪ್ಪ ಹೊಳೆಯಪ್ಪ ಮುಳ್ಳೂರ ಇವರ ಜಾಗ. ಮೇಲೆ ಹೇಳಿದ ಚಕ್ಕಬಂದಿ ತೋರಿಸಲು ದಾಖಲೆಗಳು ನಮ್ಮ ಹತ್ತಿರ ಇದೆ. ಗಂಗವ್ವ ಗೊಳೆಯವರಿಂದ ನಾವು ಖರೀದಿ ಮಾಡಿದ ಖರೀದಿ ಪತ್ರ ನಮ್ಮ ಹತ್ತಿರ ಇದೆ. 1987 ರಲ್ಲಿ ಖರೀದಿ ಪತ್ರ ಆಗಿರುತ್ತದೆ. ತಾರೀಕು ನೆನಪು ಇಲ್ಲ. ಮೂಲ ಖರೀದಿ ಪತ್ರ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ರೀತಿ ಯಾವುದೇ ಖರೀದಿ ಪತ್ರ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಗಂಗವ್ವ ಗೂಳೆ ಇವರಿಂದ ನನ್ನ ತಂದೆ ಖರೀದಿ ಮಾಡಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವಗಲ್ ಗ್ರಾಮದ ಪಂಚಾಯತಿಯವರು 1966 ರಲ್ಲಿ ಈ ಆಸ್ತಿ ಸೇರಿದಂತೆ ಹಲವಾರು ಪ್ಲಾಟಗಳು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಗಂಗವ್ವ ಗೂಳಿಯವರಿಗೆ ಈ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. VPC 1035 ಈ ಆಸ್ತಿ ನನ್ನ ತಾಯಿ ಮತ್ತು ಉಳಿದ ಮಕ್ಕಳ ಹೆಸರಿನಲ್ಲಿ ಇರುತ್ತದೆ. VPC 1034 2 ನೇ ವಾದಿಯ ಹೆಸರಿನಲ್ಲಿ ಇದೆ. 2 ನೇ ವಾದಿಯ ತಂದೆಗೆ ಕರಭಣ್ಣವರ ಕಡೆಯಿಂದ ಬಂದಿರುತ್ತದೆ. VPC 1035 ಇದರ ಅಳತೆ ಪೂರ್ವ ಪಶ್ಚಿಮ 40 ಅಡಿ ಉತ್ತರ ದಕ್ಷಿಣ 33 ಅಡಿ ಇರುತ್ತದೆ. VPC 1034 ಇದರ ಅಳತೆಯು ಸಹ ಪೂರ್ವ ಪಶ್ಚಿಮ 40 ಅಡಿ ಉತ್ತರ ದಕ್ಷಿಣ 33 ಅಡಿ ಇರುತ್ತದೆ. VPC 1035 ನನ್ನ ಆಸ್ತಿ . VPC 1034 ಮತ್ತು VPC 1035 ಇದರ ಅಳತೆ ತೋರಿಸಲು ದಾಖಲೆಯನ್ನು ಹಾಜರು ಮಾಡಿದ್ದೇನೆ. ಗಂಗವ್ವ ಗೂಳಿಯವರಿಗೆ ಸೇರಿದ VPC 1035 ನ್ನು ನನ್ನ ತಂದೆ ಕೇವಲ ಪಂಚಾಯತಿಗೆ ವರದಿ ಕೊಟ್ಟು ತಮ್ಮ ಹೆಸರಿಗೆ ಹಚ್ಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಗಂಗವ್ವ ಗೂಳಿಯವರಿಂದ ನಮ್ಮ ತಂದೆ ಯಾವುದೇ ಆಸ್ತಿ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಕರಭಣ್ಣಿ ಇವರಿಗೆ ಸೇರಿದ ಆಸ್ತಿ 2 ನೇ ವಾದಿಗೆ ಬಿಟ್ಟುಕೊಟ್ಟ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ವಾದ ಪತ್ರ ಮತ್ತು ನಕಾಶೆಯಲ್ಲಿ ಹೇಳಿದ ವಿಚಾರವನ್ನು ನಾನು ಮಾಹಿತಿ ಕೊಟ್ಟ ಮೇರೆಗೆ ಮಾಡಲಾಗಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತಿವೆ. VPC 1034 ಆಸ್ತಿಯ ಪೂರ್ವಕ್ಕೆ ಅರ್ಧ ಹಿಸ್ಸೆ ಅಂದಾಜು 60 ವರ್ಷಗಳಿಂದ 4 ನೇ ಪ್ರತಿವಾದಿಯ ಮನೆ ಇದೆ. ನಿಂಗಪ್ಪ ಬಸಪ್ಪ ಕುಂಬಾರ ಇವರ ಆಸ್ತಿಯ ಪಶ್ಚಿಮಕ್ಕೆ 35 ಅಡಿ ಅಗಲ ರಸ್ತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 15-16 ಅಡಿ ಅಗಲ ರಸ್ತೆ ಇದೆ ಎಂದು ಹೇಳುತ್ತಾರೆ. 1 ರಿಂದ 6 ನೇ ಪ್ರತಿವಾದಿಯರ ಆಸ್ತಿಯ ಪೂರ್ವಕ್ಕೆ 33 ಅಡಿಯ ರಸ್ತೆ ಇದೆ ಎಂದರೆ ಸಾಕ್ಷಿ 15-16 ಅಡಿ ಅಗಲ ರಸ್ತೆ ಇದೆ ಎಂದು ಹೇಳುತ್ತಾರೆ. ರಸ್ತೆಯ ಅಗಲವನ್ನು ನಾವು ಅಳತೆ ಮಾಡಿಸಿಲ್ಲ. ರಸ್ತೆಯ ಅಗಲ ತೋರಿಸಲು ದಾಖಲೆ ಹಾಜರು ಮಾಡಿಲ್ಲ. ಸದರಿ 1 ರಿಂದ 6 ನೇ ಪ್ರತಿವಾದಿಯರ ಆಸ್ತಿಯ ಪೂರ್ವಕ್ಕೆ ಇರುವ 33 ಅಡಿಯ ಅಗಲದ ರಸ್ತೆ ಯಾವಾಗಲ್ ಗ್ರಾಮದ ಮುಖ್ಯ ರಸ್ತೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯತಿಯವರು ಸದರಿ ರಸ್ತೆ 33 ಅಡಿ ಅಗಲದ ರಸ್ತೆ ಇದ್ದು ಅದು ಕುಡಿಯುವ ನೀರಿನ ಟ್ಯಾಂಕ್ ತನಕ ಇರುತ್ತದ ಎಂದು ದೃಡಿಕರಣ ಕೊಟ್ಟಿದ್ದಾರೆಂದರೆ ಸರಿಯಲ್ಲ. ಅದು ಸುಳ್ಳು ಪತ್ರ ಎಂದು ಹೇಳುತ್ತಾರೆ. ನಾವು ಈಗ ಹಾಲಿ VPC 1035 ಜಾಗದಲ್ಲಿ 35 ಅಡಿ ಮತ್ತು 5 ಅಡಿ ಹೆಚ್ಚುವರಿಯಾಗಿ ರಸ್ತೆ ಮುಂಭಾಗ ಬಿಟ್ಟದ್ದೇವೆ. ಅಲ್ಲಿ

ಪೂರ್ವಕ್ಕೆ ಬಾಗಿಲು ಇಟ್ಟುಕೊಂಡಿದ್ದೇನೆ. ಉತ್ತರ ದಕ್ಷಿಣ 15 ಅಡಿ ಕಟ್ಟಿಕೊಂಡು ಉಳಿದ ಜಾಗ ಬಿಟ್ಟುಕೊಂಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.